ದಿನಾಂಕ: 16.01.2021 ರಂದು ಬೆಳಗ್ಗೆ 10.30 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎನ್.ಎಸ್. ನರಸಿಂಹಶಾಸ್ತ್ರಿ, [ಪ್ರಭಾರ] ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ಎನ್.ಎಸ್. ನರಸಿಂಹಶಾಸ್ತ್ರಿ, [ಪ್ರಭಾರ] ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್ ಸಹಾಯಕ ಅಭಿಯಂತರರು, [ಪ್ರಭಾರ] ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
3. ಶ್ರೀ ಬಿ.ಕೆ. ಶಂಕರ್‌ರಾಜ್, ಸಹಾಯಕ ಅಭಿಯಂತರರು, ಬೆಸ್ಕಾಂ
4. ಶ್ರೀ ಶೇಖರ್ ನಾಯಕ್, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು,
6. ಶ್ರೀ ಪುಟ್ಟಸ್ವಾಮಿ, ಎ.ಎಸ್.ಐ. ಬಸವೇಶ್ವರನಗರ
7. ಶ್ರೀ ಮಂಜುನಾಥ್, ಎಸ್.ಎಸ್.ಐ. ಕಾಮಾಕ್ಷಿಪಾಳ್ಯ
8. ಶ್ರೀ ಬಸವರಾಜು, ಹೆಡ್‌ಕಾನ್ಸ್‌ಟೇಬಲ್, ಕಾಮಾಕ್ಷಿಪಾಳ್ಯ
9. ಶ್ರೀ ವೆಂಕಟೇಶ್, ಕಂದಾಯ ಇಲಾಖೆ
10. ಶ್ರೀಮತಿ ರೂಪಶ್ರೀ, ಕಿರಿಯ ಆರೋಗ್ಯ ಪರಿವೀಕ್ಷಕರು
11. ಶ್ರೀ ಅನಿಲ್ ರಂಗಣ್ಣ, ಸದಸ್ಯರು,
12. ಶ್ರೀ ಅರವಿಂದ್, ಸದಸ್ಯರು
13. ಶ್ರೀ ಸುರೇಶ್, ಸದಸ್ಯರು
14. ಶ್ರೀ ಕೆ.ಉಮಾಶಂಕರ್, ಸದಸ್ಯರು,
15. ಶ್ರೀ ವಿನಾಯಕ ಸದಸ್ಯರು
16. ಶ್ರೀ ಶ್ರೀನಿವಾಸ್.ಎ. ಸದಸ್ಯರು
17. ಶ್ರೀ ರವೀಂದ್ರನಾಥ್, ಸದಸ್ಯರು,

ದಿನಾಂಕ: 02.01.2021 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 16.01.2021ರಂದು ಬೆಳಗ್ಗೆ10.30 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ **ಎಸ್.ಬಿ.ಐ. ಆಫೀಸರ್ಸ್ ಸಮುದಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ** ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಶ್ರೀ ಅನಿಲ್‌ರಂಗಣ್ಣ ಸದಸ್ಯರು ಮಾತನಾಡುತ್ತಾ, ವಿನಾಯಕ ಬಡಾವಣೆ ಇಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿ ಸುಮಾರು ದಿನಗಳು ಕಳೆದರು ಸಹ ಬಾಕಿ ಉಳಿದಿರುವ ಡೆಬ್ರಿಸನ್ನು ತೆರವುಗೊಳಿಸದೆ ಇರುವುದರಿಂದ ಸಾರ್ವಜನಿಕರಿ ಓಡಾಡಲು ಕಷ್ಟವಾಗುತ್ತಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಬಾಕಿ ಉಳಿದಿರುವ ಡೆಬ್ರಿಸನ್ನು ತೆರವುಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

2. ಶ್ರೀ ಶ್ರೀನಿವಾಸ್ ಎಂಬುವವರು ಮಾತನಾಡುತ್ತಾ ವಿಶ್ವೇಶ್ವರಯ್ಯ ಪಾರ್ಕ್ [ಆಲದ ಮರ ಪಾರ್ಕ್] ನ ಒಳಗೆ ಅಲ್ಲಲ್ಲಿ ಕಸದ ಗುಡ್ಡೆಗಳಿದ್ದು, ಇದನ್ನು ತೆರವುಗೊಳಿಸಲು ಅನೇಕ ಬಾರಿ ತಿಳಿಸಿದರು ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ಸಂಬಂಧಪಟ್ಟ ತೋಟಗಾರಿಕೆ ಇಲಾಖೆಯವರಿಗೆ ಮಾತನಾಡಿ ಕಸವನ್ನು ತೆರವುಗೊಳಿಸಿ ಉದ್ಯಾನವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ಸೂಚಿಸಲು ಕಾರ್ಯದರ್ಶಿಗಳಿಗೆ ತಿಳಿಸಿದರು.

3. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು ಬಿದ್ದಿರುವುದರಿಂದ ತುರ್ತಾಗಿ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ ರವರು ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಪು.ತಿ.ನೋ.

4. ವಾರ್ಡ್ ವ್ಯಾಪ್ತಿಯ ಬೇಕರಿ ಮತ್ತು ಕಾಂಡಿಮೆಂಟ್ಸ್‌ಗಳಲ್ಲಿ ಬೀಡಿ ಮತ್ತು ಸಿಗರೇಟ್ ಸೇವನೆಯನ್ನು ಸಾರ್ವಜನಿಕ ಸ್ಥಳದಲ್ಲಿ ಮಾಡುತ್ತಿರುವುದರಿಂದ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಅನಿಲ್‌ರಂಗಣ್ಣ ರವರು ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಪೋಲಿಸ್ ಅಧಿಕಾರಿಗಳು ಕ್ರಮ ವಹಿಸುವಂತೆ ತಿಳಿಸಿದರು.

5. ಸದಸ್ಯರಾದ ಶ್ರೀ ವಿನಾಯಕ್ ರವರು ಮಾತನಾಡುತ್ತಾ, ಶ್ರೀರಾಮನಗರ ಮತ್ತು ಏಕೆ ಕಾಲೋನಿ, ಸರ್ಕಾರಿ ಶಾಲೆ ಹಿಂಭಾದಲ್ಲಿ ಒಳಚರಂಡಿ ಮಾರ್ಗವು ಆಗಿಂದಾಗೆ ಬ್ಲಾಕ್ ಆಗುತ್ತಿರುವುದರಿಂದ ಒಳಚರಂಡಿ ಮಾರ್ಗವನ್ನು ಬದಲಾಯಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು , ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಸ್ಥಳವನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

6. ಸಭೆಯಲಿ ಹಾಜರಿದ್ದ ಸಾರ್ವಜನಿಕರು ಮಾತನಾಡುತ್ತಾ, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಬ್‌ಲೇನ್ ವತಿಯಿಂದ ದೊಡ್ಡಗಾತ್ರದ ಪೈಪ್‌ಗಳನ್ನು ಅಳವಡಿಸುತ್ತಿದ್ದು, ಸದರಿ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಓಡಾಡಲು ಅನುವು ಮಾಡಿಕೊಡಬೇಕಾಗಿ ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

7. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಕಂದಾಯ ಪರಿವೀಕ್ಷಕರಿಗೆ ವಾರ್ಡಿನಲ್ಲಿ ಬಾಕಿ ಇರುವ ಕಂದಾಯ ವಸೂಲಾತಿಯನ್ನು ಸಮರ್ಪಕವಾಗಿ ವಸೂಲಿ ಮಾಡಿ ಬಿ.ಬಿ.ಎಂ.ಪಿ.ಯ ತೆರಿಗೆಯನ್ನು ಹೆಚ್ಚಿಸಬೇಕೆಂದು ತಿಳಿಸಿದರು.

8. ಶ್ರೀ ಅನಿಲ್‌ರಂಗಣ್ಣ ಸದಸ್ಯರು ಮಾತನಾಡುತ್ತಾ ಮ್ಯಾಕ್ಸ್ ಮುಲ್ಲರ್ ಸ್ಕೂಲ್ ಸುತ್ತ ಮುತ್ತ ಖಾಸಗಿ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದು, ಇದರ ಬಗ್ಗೆ ಸಂಚಾರಿ ಪೋಲಿಸ್ ಇಲಾಖೆಯವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಂಚಾರಿ ಪೋಲಿಸ್ ಇಲಾಖೆಯವರು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 101

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101